(MR. SPEAKER in the Chair.)

CONDOLENCE REFERENCES

Re: **Demise of Sriyuths B. R. Tambakada, P. Mahadevaiah. B. Singari Gowda**

Mr. SPEAKER.—Regarding the reference of condolence, I would like to proceed on a different procedure altogether. So long, the reference used to be made by the Leader of the House and speeches were made in that respect. I looked into the authority and I find the procedure in the House of Commons is a different one altogether. Therefore, the Chair makes a reference and it is carried ; no speeches are made. I would, therefore, request the Hon'ble Members to proceed on this line instead of on the old lines of making speeches and taking the time of the House. I would like to know the views of the Hon'ble Members in this respect.

Sri S. NIJALINGAPPA (Chief Minister).—Sir, so far as I know, the procedure just now mentioned by you is in vogue in the Houses of Parliament and in the House of Commons also. Except in very rare cases, the Leader of the House and the Opposition will take part and make very few remarks just pertinent to the subject. I unhesitatingly accept your suggestion.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—ಸ್ವಾಮಿ, ಈ ಸಂದರ್ಭದಲ್ಲಿ, ನಮ್ಮ ಸಹೋದ್ಯೋಗಿಗಳನ್ನು ನಾವು ಕಳೆದುಕೊಂಡಿರುವಾಗ, ಕೊನೆಯ ಪಕ್ಷ ಕೆಲವು ಜನ ಅವರ ಮಿತ್ರರಿಗಾದರೂ ಅವರ ವಿಷಯದಲ್ಲಿರುವ ಗೌರವ ವಿಶ್ವಾಸವನ್ನು ತೋರಿಸುವುದಕ್ಕೆ ಅವಕಾಶ ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ನಾನು ಈ ವಿಷಯವನ್ನು ವಿಚಾರ ಮಾಡಿದ್ದೇನೆ. ಗೆಳೆಯರೂ ಮಿತ್ರರೂ ಎಲ್ಲರಿಗೂ ಇದ್ದಾರೆ. ಶ್ರೀ ತಂಬಾಕಡ್ ಅವರಿಗೂ ಇದ್ದಾರೆ, ಸಿಂಗ್ರಿಗೌಡರಿಗೂ ಇದ್ದಾರೆ, ಮಹದೇವಯ್ಯನವರಿಗೂ ಇದ್ದಾರೆ.....

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—Solemnity ಹೋಗಿಬಿಡುತ್ತದೆ, ಹೆಚ್ಚು ಮಾತನಾಡಿದರೆ.

ಅಧ್ಯಕ್ಷರು.—ಹೌದು. ನಮ್ಮ ಸಂತಾಪ ಸೂಚಿನಾ ಭಾಷಣಗಳನ್ನು ಮಾಡುವುದಕ್ಕೆ ಮನಸ್ಸು ಬರುತ್ತದೆ. ಆದರೆ ಲೋಕಸಭೆಯಲ್ಲಿಯೂ ನಾನು ಹೇಳಿದ ಪದ್ಧತಿಯೇ ರೂಢಿಯಲ್ಲಿದೆ. ಹೌಸ್ ಆಫ್ ಕಾಮನ್ಸ್‌ನಲ್ಲಿಯೂ ಇದೇ ರೂಢಿಯಿದೆ. ಒಬ್ಬರಿಗೆ ಮಾತ ನಾಡಲು ಅವಕಾಶ ಕೊಟ್ಟರೆ ಅದು ಬೆಳೆಯುತ್ತಾ ಹೋಗುತ್ತದೆ. ಆದಕಾರಣ ನಾನು ಹೇಳಿದುದಕ್ಕೆ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ.

I regret to inform the House of the death of Sriyuts Tambakada Basavannappa Ramappa, P. Mahadevaiya and B. Singri Gowda, members of this Assembly and I desire on behalf of the House to express our sense of the loss we have sustained and our sympathy with the relatives of the Hon'ble Members.

I request the Hon'ble Members to stand in silence for two minutes.

(The House stood in silence for two minutes)

Mr. SPEAKER.—The Condolence references are carried. The sentiments of the members will be conveyed to the members of the bereaved families.

BUDGET FOR 1957-58—GENERAL DISCUSSION—(*Continued*).

ಶ್ರೀಮತಿ ರತ್ನಮ್ಮ (ಶಿವಮೊಗ್ಗ). ಅಧ್ಯಕ್ಷರೆ, ನೂತನ ರಾಜ್ಯದ ಪ್ರಥಮ ಆಯವ್ಯಯದ ಅಂದಾಜು ಪಟ್ಟಿಯನ್ನು ಸ್ವಾಗತಿಸಲು ನಾನು ಬಹಳ ಹೆಮ್ಮೆಪಡುತ್ತೇನೆ. ಇಂಥ ಪ್ರಗತಿದಾಯಕವಾದ ಬಡ್ಜೆಟ್ಟನ್ನು ತಯಾರಿಸಿ ಈ ಸಭೆಯ ಮುಂದೆ ಮಂಡಿಸಿರುವ ಮಾನ್ಯ ಅರ್ಥಸಚಿವರು ಅಭಿನಂದನಾರ್ಹರು. ಇದನ್ನು ವಿಮರ್ಶಿಸುವಾಗ ಮಾನ್ಯ ಪ್ರಾಂತಗಳಿಗೆ ಗಮನಕೊಡಬೇಕು. ನಮ್ಮ ರಾಜ್ಯವಾಗಿದ್ದುದು ವಿಶಾಲ ರಾಜ್ಯವಾಯಿತು. ಮದರಾಸು, ಹೈದರಾಬಾದು, ಬೊಂಬಾಯಿ ಪ್ರಾಂತಗಳಲ್ಲಿದ್ದ ಕನ್ನಡ ಪ್ರದೇಶಗಳೂ ಕೊಡಗೂ ಸೇರಿ ನಮ್ಮ ರಾಜ್ಯ ವಿಶಾಲ ಪ್ರಾಂತವಾಯಿತು. ಕನ್ನಡಿಗರ ಬಹುಕಾಲದ ಕನಸು ನನಸಾಗಿ ಕರ್ನಾಟಕ ಪ್ರಾಂತವಾಯಿತು. ಇದಕ್ಕೆ ಮುಂಚೆ, ಎಂದರೆ, ಈ ರಾಜ್ಯಕ್ಕೆ ಆ ಕನ್ನಡ ಪ್ರದೇಶಗಳು ಸೇರುವುದಕ್ಕೆ ಮುಂಚೆ, ಅವು ಬೇರೆ ಬೇರೆ ರಾಜ್ಯಗಳಿಗೆ ಸೇರಿದ್ದು ಕನ್ನಡ ಪ್ರದೇಶಗಳಲ್ಲಿ ಎಷ್ಟುಮಟ್ಟಿಗೆ ರಾಷ್ಟ್ರಾಭಿವೃದ್ಧಿಯಾಗಬೇಕಾಗಿತ್ತೋ ಅಷ್ಟುಮಟ್ಟಿಗೆ ಆಗಿರಲಿಲ್ಲ. ಈ ಪ್ರದೇಶಗಳನ್ನು ನವತಿಯ ಮಕ್ಕಳಂತೆ ಕಂಡು, ರಾಷ್ಟ್ರಾಭ್ಯುದಯ ಕೆಲಸಗಳಿಗೆ ಸಾಕಷ್ಟು ಗಮನ ಕೊಡದೆ ಆ ಪ್ರದೇಶಗಳು ಹಿಂದುಳಿಯುವುದಕ್ಕೆ ಅವಕಾಶವಾಯಿತು. ಅಲ್ಲಿನ ಜನತೆ ನಮ್ಮೊಡನೆ ಸೇರಲು ಮನಸ್ಸು ಮಾಡಿ ನಮ್ಮ ಕಡೆ ಆಶಾಜ್ಯೋತಿಯಿಂದ ನೋಡುತ್ತಿರುವಾಗ ಅಲ್ಲಿ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚಾದರೂ ಸಹ ಮಾಡುವುದು ನಮ್ಮೆಲ್ಲರ ಪವಿತ್ರ ಕರ್ತವ್ಯವಾಗಿದೆ. ಈ ಪವಿತ್ರ ಕರ್ತವ್ಯವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅರ್ಥಸಚಿವರು ಈ ಬಡ್ಜೆಟ್ಟನ್ನು ತಯಾರುಮಾಡಿ ನಮ್ಮ ಮುಂದಿಟ್ಟಿರು